**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು– 01**

**ಸಂಖ್ಯೆ:ಎಂಸಿ4ಮಅಸಂಘೋ34/2010–11** **ದಿನಾಂಕ:08/09/2011**

**ಜ್ಞಾಪನಾ**

ವಿಷಯ:–ಕರ್ನಾಟಕ ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ.

ಉಲ್ಲೇಖ:–1) ಸರ್ಕಾರದ ಅಧಿಸೂಚನೆ ಸಂಖ್ಯೆಇಡಿ4ಎಸ್ಎಂಸಿ 2005 ದಿನಾಂಕ11/09/2007 ಹಾಗೂ ತಿದ್ದುಪಡಿ ದಿನಾಂಕ23/10/2007.

2) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ5ಎಸ್ಎಂಸಿ2002 ದಿನಾಂಕ20/7/2004

3) ಸರ್ಕಾರದ ತಿದ್ದೋಲೆಸಂಖ್ಯೆಇಡಿ22ಎಂಪಿಎಸ್ 2005 ದಿನಾಂಕ12/12/2006

4) ಉಪನಿರ್ದೇಶಕರುಗಳಿಂದ ಬಂದಿರುವ ಪ್ರಸ್ತಾವನೆಗಳು

––000––

**ಪ್ರಸ್ತಾವನೆ :–**

ಮೇಲಿನ ಉಲ್ಲೇಖ(1)ರಿಂದ(3)ರವರೆಗಿನ ಸರ್ಕಾರಿ ಅಧಿಸೂಚನೆಗಳಲ್ಲಿ ಮತೀಯ ಅಲ್ಪಸಂಖ್ಯಾತರ ಆಡಳಿತ ಮಂಡಳಿಯವರು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ದಿನಾಂಕ:08/09/**2011ರಂದು** ಪರಿಶೀಲನಾ ಸಮಿತಿ ಸಭೆ ಸೇರಿ ಕೆಳಕಂಡ ಶಿಕ್ಷಣ ಸಂಸ್ಥೆಗಳ ದಾಖಲೆಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಕೆಳಕಂಡ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತರ ಶಾಲೆಗಳೆಂದು ಘೋಷಿಸುವ ಬಗ್ಗೆ ಕೆಲವೊಂದು ಷರತ್ತುಗಳನ್ನು ಅನ್ವಯಿಸಿ, ಸದರಿ ಷರತ್ತುಗಳನ್ನು ಪೂರೈಸಿರುವಂತಹ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತರ ಶಾಲೆಗಳೆಂದು ಘೋಷಿಸಲು ಸಮಿತಿಯು ತೀರ್ಮಾನಿಸಿ ಸಮ್ಮತಿಸಲಾಗಿದೆ.

**ಆದೇಶ :–**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತರು ನಡೆಸುತ್ತಿರುವ ಶಾಲೆಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿ ಆದೇಶಿಸಿದೆ. ಕಾಲಾನುಕಾಲಕ್ಕೆ ಮಾನ್ಯತೆಯನ್ನು ನವೀಕರಿಸುವ ಸಮಯದಲ್ಲಿ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಘೋಷಣೆ ಮಾಡಲಾದ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಹಿಂತೆಗೆದುಕೊಳ್ಳಲಾಗುವುದು.

| ಕ್ರಮ ಸಂಖ್ಯೆ | ಶಿಕ್ಷಣ ಸಂಸ್ಥೆಯ ಹೆಸರು | ಧರ್ಮ | ಶಾಲೆಯ ಹೆಸರು ಮತ್ತು ವಿಳಾಸ |
|---|---|---|---|
| 1 | ಸ್ಯೆಂಟ್ ಟ್ಯಾಕ್ಟ್ ಸ್ಕೂಲ್ ಅಂಡ್ ಗೌಸಿಯಾ ಮದರಸ,, 2ನೇ ಕ್ರಾಸ್, ಕುಶಾಲನಗರ, ಅರೇಬಿಕ್ ಕಾಲೇಜು ಅಂಚೆ, ವೆಂಕಟೇಶಪುರ, ಬೆಂಗಳೂರು–560045. | ಮುಸ್ಲಿಂ | ಸೆಂಟ್ ಟ್ಯಾಕ್ಟ್ ಕನ್ನಡ ಕಿರಿಯ ಪ್ರಾಥಮಿಕ ಶಾಲೆ, ಕುಶಾಲನಗರ, ಅರೇಬಿಕ್ ಕಾಲೇಜು ಅಂಚೆ, ವೆಂಕಟೇಶಪುರ, ಬೆಂಗಳೂರು–560045. |
| 2 | ಅರ್ಸುಲೈನ್ ಫ್ರಾನ್ಸಿಸ್ಕನ್ ಎಜುಕೇಶನಲ್ ಸೊಸೈಟಿ, ಜನರಲೇಟ್, ಸೋಮರ್ಸ್, ದೇರಲಕಟ್ಟೆ, ದಕ್ಷಿಣ ಕನ್ನಡ. | ಕ್ರಿಶ್ಚಿಯನ್ | ಜ್ಞಾನಬೋಧಿನಿ ಹಿರಿಯ ಪ್ರಾಥಮಿಕ ಶಾಲೆ, ಕೆಂಗೇರಿ, ಬೆಂಗಳೂರು |
| 3 | ದ ಸಿಸ್ಟರ್ಸ್ ಆಫ್ ಚ್ಯಾರಿಟಿ ಎಜುಕೇಶನಲ್ ಸೊಸೈಟಿ ಆಫ್ ಕರ್ನಾಟಕ, ಮಂಗಳೂರು | ಕ್ರಿಶ್ಚಿಯನ್ | ಆಶೀರ್ವಾದ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ |
| 4 | ದ ಸಿಸ್ಟರ್ಸ್ ಆಫ್ ಚ್ಯಾರಿಟಿ ಎಜುಕೇಶನಲ್ ಸೊಸೈಟಿ ಆಫ್ ಕರ್ನಾಟಕ, ಮಂಗಳೂರು | ಕ್ರಿಶ್ಚಿಯನ್ | ಆಶೀರ್ವಾದ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ |
| 5 | ಟೆರೇಸಿಯನ್ ಕಾರ್ಮೆಲ್ ಎಜುಕೇಶನ್ ಸೊಸೈಟಿ, ವಿ.ವಿ.ಮೊಹಲ್ಲಾ, ಮೈಸೂರು | ಕ್ರಿಶ್ಚಿಯನ್ | ಟೆರೇಸಿಯನ್ ಹಿರಿಯ ಪ್ರಾಥಮಿಕ ಶಾಲೆ, ಸಿದ್ಧಾರ್ಥನಗರ, ಮೈಸೂರು |

| | | | |
|---|---|---|---|
| 6 | ಕಿಂಟೋ ಎಜುಕೇಶನ್ ಸೊಸಾಟಿ, ವಿನಾಯಕನಗರ, ಹೊಸಗುಡ್ಡದಹಳ್ಳಿ, ಬೆಂಗಳೂರು-26 | ಮುಸ್ಲಿಂ | ಕಿಂಟೋ ಆಂಗ್ಲ ಮಾಧ್ಯಮ ಪ್ರೌಢಶಾಲೆ, ವಿನಾಯಕನಗರ, ಹೊಸಗುಡ್ಡದಹಳ್ಳಿ, ಬೆಂಗಳೂರು-26 |
| 7 | ಖಿಲೀರಿಯಾ ವಿದ್ಯಾ ಸಮಿತಿ, ಇಡ್ಯಾಗ್ರಾಮ, ಸುರತ್ಕಲ್ ಅಂಚೆ, ಮಂಗಳೂರು ತಾಲ್ಲೂಕು | ಮುಸ್ಲಿಂ (ಬ್ಯಾರಿ) | ಖಿಲೀರಿಯಾ ಹಿರಿಯ ಪ್ರಾಥಮಿಕ ಶಾಲೆ, ಇಡ್ಯಾಗ್ರಾಮ, ಸುರತ್ಕಲ್ ಅಂಚೆ, ಮಂಗಳೂರು ತಾಲ್ಲೂಕು |
| 8 | ದಿ ಮೈಸೂರು ಡಯಾಸಿಸನ್ ಎಜುಕೇಶನ್ ಸೊಸೈಟಿ, ಜಯಲಕ್ಷ್ಮೀಪುರಂ, ಮೈಸೂರು. | ಕ್ರಿಶ್ಚಿಯನ್ | ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ, ಪ್ರಕಾಶ್ ಪಾಳ್ಯ, ಕೊಳ್ಳೆಗಾಲ ತಾಲ್ಲೂಕು |
| 9 | ಟಿಪ್ಪು ಎಜುಕೇಶನ್ ಟ್ರಸ್ಟ್, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ. | ಮುಸ್ಲಿಂ | ಎಂ.ಎಸ್.ಎಸ್.ಹಿರಿಯ ಪ್ರಾಥಮಿಕ ಶಾಲೆ, ಗೌರಿಬಿದನೂರು. |

ಷರತ್ತುಗಳು

1) ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ನೊಂದಣಿ ಕಾಯ್ದೆ ಪ್ರಕಾರ ನೊಂದಣಿಯಾಗಿರ ಬೇಕು. ಹಾಗೂ ಕಾಲಕಾಲಕ್ಕೆ ನವೀಕರಿಸಿರಬೇಕು.

2) ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಮತೀಯ ಅಲ್ಪಸಂಖ್ಯಾತರ ಸಂಖ್ಯೆ ಕನಿಷ್ಟ ಮೂರನೆ ಎರಡರಷ್ಟಿರಬೇಕು.

3) ಶಾಲೆಗಳನ್ನು ನಡೆಸುವ ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರರಿಂದ ಜಾತಿ ಪ್ರಮಾಣ ಪತ್ರವನ್ನು ಪಡೆದಿರಬೇಕು.

4) ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಪ್ರಾಥಮಿಕ/ಪ್ರೌಢಶಾಲೆಗಳನ್ನು ನಡೆಸಲು ಕರ್ನಾಟಕ ಶಿಕ್ಷಣ ಕಾಯ್ದೆಯಡಿಯಲ್ಲಿ ಇಲಾಖೆಯಿಂದ ನೊಂದಾಯಿಸಿರಬೇಕು, ಮತ್ತು ಕಾಲಕಾಲಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಿರಬೇಕು. ಹಾಗೂ ಇತ್ತೀಚಿನ ಮಾನ್ಯತೆ ನವೀಕರಣ ಪತ್ರ ಹೊಂದಿರತಕ್ಕದ್ದು.

5) ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ, ಆಯಾಯ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾಯ ಅಲ್ಪಸಂಖ್ಯಾತ ಸಮುದಾಯದ ಜನಗಣತಿಗೆ ತಕ್ಕಂತೆ, ಆಯಾಯ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲು ಆಯಾಯ ವರ್ಗದ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳನ್ನು ಕನಿಷ್ಟ ಅದೇ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು.

6.) ಶಾಲೆಗಳನ್ನು ನಡೆಸುತ್ತಿರುವ ಆಡಳಿತ ಮಂಡಳಿಯು ಆಯಾ ಮತೀಯ ಅಲ್ಪಸಂಖ್ಯಾತ(ಕ್ರಿಶ್ಚಿಯನ್, ಮುಸ್ಲಿಂ,ಜೈನ,ಬೌದ್ಧ, ಸಿಖ್) ರೆಂದು ಖಚಿತ ಪಡಿಸಿಕೊಳ್ಳತಕ್ಕದ್ದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿಯನ್ನು

1. ಸರ್ಕಾರದ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢಶಿಕ್ಷಣ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಉಪನಿರ್ದೇಶಕರು, (ಆಡಳಿತ),ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೆಂಗಳೂರು ಉತ್ತರ ವಲಯ-3, ಬೆಂಗಳೂರು ದಕ್ಷಿಣ ವಲಯ-1, ದಕ್ಷಿಣ ವಲಯ-2, ಮಂಗಳೂರು ತಾಲ್ಲೂಕು ವಲಯ, ಕೊಳ್ಳೆಗಾಲ, ಗೌರಿಬಿದನೂರು, ಮೈಸೂರು, ದಕ್ಷಿಣ ವಲಯ ಮೈಸೂರು, ಕೆ.ಆರ್.ಪೇಟೆ, ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
5. ಸಂಬಂಧಿಸಿದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6. ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ. 7. ಕಛೇರಿ ಪ್ರತಿ